ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ್ಯಾದಂರವರ ನ್ಯಾಯಾಲಯ ಪೊನ್ನಂಪೇಟೆ .

ಸಿ.ಸಿ.ನಂ.1197/2023.

ಪಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ,
ಗೋಣಿಕೊಪ್ಪ ಪೋಲೀಸ್,

ವಿರುಧ್ದ

ಆರೋಪಿ ಂ: ಮಂಜುನಾಥ್ ಹೆಚ್.ಎ,

ಶ್ರೀ ಪ್ರಥೀಪ್ ಪೋತದಾರ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದ ನಾನು ಆರೋಪಿಯಾದಃ

ಮಂಜುನಾಥ್ ಹೆಚ್.ಎ,
ತಂದೆಃ ಪೌತಿ ಆಣ್ಣಯ್ಯ,
ಪ್ರಾಯ 47 ವರ್ಷ
ವಾಸಃ ಗಾಂಧಿ ಕಾಲೋನಿ,
ಕೈಕೇರಿ ಗ್ರಾಮ ಮತ್ತು ಅಂಚೆ,
ಕೊಡಗು.

ದೋಷಾರೋಪಣೆ

ದಿನಾಂಕ 26.05.2023 ರಂದು ಸಮಯ ರಾತ್ರಿ 8.30 ಗಂಟೆಯ ಸಮಯದಲ್ಲಿ ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಕೈಕೇರಿ ಗ್ರಾಮದ ಗಾಂಧಿ ಕಾಲೋನಿಯ ಲೀಲಾವತಿಯವರ ಮನೆಯ ಮುಂದಿನ ಕಾಂಕ್ರೀಟ್ ರಸ್ತೆಯಲ್ಲಿ ಸಾಕ್ಷಿ 1 ಅಕಾಶ್ ರವರು ಸಾಕ್ಷಿ 2 ದರ್ಶನ್ ರವರೊಂದಿಗೆ ಮಾತನಾಡಿಕೊಂಡು ನಿಂತಿರುವಾಗ ಆರೋಪಿಯಾದ ನೀವು ಹಳೆಯ ದ್ವೇಷದಿಂದ ಸಾಕ್ಷಿ 1 ರವರೊಂದಿಗೆ ವಿನಾ ಕಾರಣ ಜಗಳ ತೆಗೆದು, ಎಲ್ಲಿಂದಲೋ ತಂದಿದ್ದ ಮರದ ಹಿಡಿಯಿರುವ ಕತ್ತಿಯಿಂದ ಸ್ವಇಚ್ಛೆಯಿಂದ ಸಾಕ್ಷಿ 1 ರವರ ತಲೆಯ ಭಾಗಕ್ಕೆ ಕಡಿಯಲು ಪ್ರಯತ್ನಿಸಿದಾಗ ಸಾಕ್ಷಿ 1 ರವರು ತಡೆಯಲು ಪ್ರಯತ್ನಿಸಿದಾಗ ಕತ್ತಿ ಪಟು ಸಾಕ್ಷಿ 1 ರವರ ಬಲಕೈ ಮಣಿಕಟ್ಟಿನ ಭಾಗಕ್ಕೆ ತಾಗಿ ಬಲಕೈ ಮಣಿಕಟ್ಟಿನ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಆ ಮೂಲಕ ನೀವು ನಭಾ.ದ.ಸಂ.ಕಲಂ 326 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಸಾಕ್ಷಿ 1 ರವರ ಜೊತೆ ಏಕಾಏಕಿ ಜಗಳ ತೆಗೆದು ಸಾಕ್ಷಿ 1 ರವರನ್ನು ಮತ್ತು ಮೃತಪಟ್ಟಿರುವ ಅವರ ತಾಯಿಯನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ.

ಈ ಮೂಲಕ ನೀವು ಭಾ.ದ.ಸಂ.ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಪೊನ್ನಂಪೇಟಿ
ದಿನಾಂಕ: 14.11.2024

ಶ್ರೀ ಪ್ರದೀಪ್ ಪೋತ್ರದಾರ
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಪೊನ್ನಂಪೇಟಿ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 240ರಡಿ ಆರೋಪಿಯ ಹೇಳಿಕೆ

ಪ್ರ೧:–ಈಗ ನಿಮಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿದ ಆರೋಪವು ಅರ್ಥವಾಯಿತೆ?
ಉ:

ಪ್ರ೨:– ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥಾವ ಪ್ರತಿರಕ್ಷಣೆ ಇದೆಯೇ?
ಉ:

ಈ ಮೇಲಿನ ಆರೋಪವನ್ನು ಆರೋಪಿತನಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ, ಹೇಳಿ, ವಿವರಿಸಿ ಆತನು ಅದನ್ನು ಅರ್ಥಮಾಡಿಕೊಂಡು ನಂತರ ನೀಡಲಾದ ಉತ್ತರವನ್ನು ನಾನೇ ಸ್ವತ: ಬರೆದುಕೊಂಡಿರುವ ಸರಿಯಾದ ಮತ್ತು ನಿಜವಾದ ಉತ್ತರವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ:14.11.2024
ಸ್ಥಳ: ಪೊನ್ನಂಪೇಟಿ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟಿ.